# ಜೀವ – ಸಾವುಗಳ ನಾಟಕ ಚಕ್ರ

ಕನ್ನಡದ ಆದಿಕವಿ ಪಂಪ 'ಕವಿತೆಯೊಳ್ ಆಸೆಗೆಯ್ವ ಫಲಮಾವುದೋ' ಎಂದು ಪ್ರಶ್ನಿಸಿಕೊಂಡು ಅದಕ್ಕೆ ಉತ್ತರ ಕಂಡುಕೊಳ್ಳುವ ಪ್ರಯತ್ನ ಮಾಡುತ್ತಾನೆ. ಆದಿಪುರಾಣದಲ್ಲಿ ಬರುವ ಒಂದು ಪದ್ಯಭಾಗದಲ್ಲಿ 'ಗೌರವ, ಪ್ರೀತಿ, ಲಾಭ' ಕಾವ್ಯದಿಂದ ದೊರೆಯುವ ಫಲಗಳು. 'ಲೋಕ ಹೊಗಳುವ ಪ್ರಸಿದ್ಧಿ, ಮುಕ್ತಿ' ಜಿನೇಂದ್ರನ ಆರಾಧನೆ ದೊರೆಯುವ ಫಲಗಳು ಎಂದು ಗುರುತಿಸುತ್ತಾನೆ. ಪಂಪ ತನ್ನ ಆದಿಪುರಾಣದಲ್ಲಿ ಭೋಗದ ತುತ್ತ ತುದಿಯಲ್ಲಿ ವಿಹರಿಸುವ ಬದುಕಿನ ಬೆನ್ನ ಬದಿಯಲ್ಲೇ ವೈರಾಗ್ಯ ಅಥವಾ ಮುಕ್ತಿ ಇದೆ ಅನ್ನುವುದನ್ನು ಚಮತ್ಕಾರವೆನ್ನುವಂತೆ ತಂದು ತೋರಿಸುತ್ತಾನೆ. ವಿರಹ, ಶೃಂಗಾರ, ಭೋಗದಲ್ಲಿ ಈಸುತ್ತಿರುವಾಗಲೇ ಮೃತ್ಯು ಆವರಿಸುವ ಬದುಕಿನ ಸತ್ಯವನ್ನು ಅನಾವರಣಗೊಳಿಸಿ ಬಿಡುತ್ತಾನೆ. ಎಂತಹ ಉನ್ನತವಾದ ಬದುಕಾಗಲೀ, ಚೇತನವಾಗಲೀ ಸಾವಿನ ಬಲೆಯಿಂದ ತಪ್ಪಿಸಿಕೊಳ್ಳಲಾಗದು ಎಂಬುದು ಅವನು ಕಾಣಿಸುವ ಸತ್ಯ. ಇಂತಹ ಹಲವು ಪ್ರಸಂಗಗಳು ಆದಿಪುರಾಣದಲ್ಲಿ ಬರುತ್ತದೆ.

ಬದುಕಿನ ಅಂತಿಮ ಸತ್ಯ ಸಾವು ಆಗಿರುವುದರಿಂದ ಸಾವನ್ನು ಎದುರಿಸುವುದು ಹೇಗೆ, ಅದನ್ನು ಸಹನೀಯಗೊಳಿಸುವುದು ಹೇಗೆ ಎಂಬುದರ ಬಗ್ಗೆ ದಾರ್ಶನಿಕರು, ತತ್ವಜ್ಞಾನಿಗಳು ಚಿಂತಿಸಿದ್ದಾರೆ. ವಿಚಾರಗಳನ್ನು ಬರಹದ ರೂಪದಲ್ಲಿ ಮಂಡಿಸಿದ್ದಾರೆ. ಆದರೆ ಕವಿಯೊಬ್ಬ ಅದನ್ನು ಕೃತಿಯಲ್ಲಿ ಕಾಣಿಸುವ ಕ್ರಮ ಸೃಜನಾತ್ಮಕವಾದದ್ದು. ನೇರವಾಗಿ ವಿಚಾರ ಮಂಡಿಸುವುದಕ್ಕಿಂತ ಮುಂಚೆ ದೃಷ್ಟಾಂತಗಳನ್ನು ಬಳಸಿಕೊಳ್ಳುತ್ತಾನೆ. 'ಪದ, ರೂಪಕಗಳ' ಮೂಲಕ ಸುಂದರವಾದ ಜಗತ್ತೊಂದನ್ನು ಸೃಷ್ಟಿಸುತ್ತಾನೆ. ಆ ಸುಂದರವಾದ ಜಗತ್ತನ್ನು ತನ್ನ ಭಾಷಿಕ ಹತಾರಗಳಿಂದ ಭಗ್ನಗೊಳಿಸಿ 'ಇದು ನಶ್ವರ' ಎಂಬ ಸತ್ಯ ಕಣ್ಣೆದುರು ನಿಲ್ಲುವಂತೆ ಮಾಡುತ್ತಾನೆ. ಪಂಪನ ಆದಿಪುರಾಣದಲ್ಲಿ ಇಂತಹ ಕಣ್ಣೆದುರೇ ಮಿಂಚಿ ಮಾಯವಾಗುವ ಹಲವು ರೂಪಕಗಳಿವೆ. ಅವುಗಳನ್ನು ಜನ್ಮಾಂತರಗಳ ಚಕ್ರದಲ್ಲಿ ಸಿಲುಕಿದ ನರಮಾನವರು ಮಾಡಲೇಬೇಕಾದ ಪ್ರಯಾಣವನ್ನಾಗಿಸುತ್ತಾನೆ. ಜೈನ ಧರ್ಮದ ಭನಾವಳಿಗಳಲ್ಲಿ ಸಿಲುಕಿದ ಜೀವ ಒಂದು ಜನ್ಮದಿಂದ ಇನ್ನೊಂದು ಜನ್ಮಕ್ಕೆ ಸಾಗುವ ಪರಿ 'ಮರು ಜನ್ಮದಲ್ಲಿ' ನಂಬಿಕೆ ಇಟ್ಟವರಿಗೆ ಮಾದರಿ ಯಾನವಾಗುತ್ತದೆ.

ಆದಿ ದೇವನ ಪರಿನಿಷ್ಕ್ರಮಣ ಕಾಲ ಸಮೀಪಿಸಿದ ಸಂದರ್ಭದಲ್ಲಿ ತನ್ನ ಮಕ್ಕಳಾದ ಭರತ–ಬಾಹುಬಲಿಯೊಂದಿಗೆ ಸಭೆಗೆ ಆಗಮಿಸಿ ಸಿಂಹಾಸನದಲ್ಲಿ ಕುಳಿತುಕೊಳ್ಳುತ್ತಾನೆ. ಸುರಲೋಕದ ದೈವವಾದ ಇಂದ್ರ ಈ ಶುಭ ಕಾಲದ ಬಗ್ಗೆ ತಿಳಿದು ಪರಿನಿಷ್ಕ್ರಾಮಣವನ್ನು ಆಚರಿಸಲು ಭೂಮಿಗೆ ಬಂದು ಸಭೆಯನ್ನು ಪ್ರವೇಶಿಸುತ್ತಾನೆ. ಈ ಉತ್ಸವವನ್ನು ಸಂಗೀತ, ನೃತ್ಯಗಳಿಂದ ಆಚರಿಸಲು ಆದಿದೇವನ ಅನುಮತಿ ಪಡೆಯುತ್ತಾನೆ. ಸಮಸ್ತ ರಾಜಸಮೂಹದ ಎದುರು ದೇವಾಂಗನೆ ನೀಲಾಂಜನೆಯ ನೃತ್ಯ ಆರಂಭವಾಗುತ್ತದೆ. ಪಂಪನ ಅದ್ಭುತವಾದ ಕಾವ್ಯ ಭಾಗಗಳಲ್ಲಿ ಈ ನೃತ್ಯ ಭಾಗವೂ ಒಂದು. ಸುಂದರವಾದ ನೀರಗುಳ್ಳೆಯೊಂದು ನಾನಾವರ್ಣ ತೋರಿ ಉಬ್ಬಿ ಹಿಗ್ಗುತ್ತಾ, ತನ್ನ ಹಿಗ್ಗುವಿಕೆಯನ್ನು ತಾನೇ ತಡೆಯಲಾರೆ ಎಂಬಂತೆ ಒಡೆದು ಹೋಗುವ ಜೀವ–ಸಾವುಗಳ ಅದ್ಭುತ ಪ್ರಸಂಗವದಾಗಿದೆ.

ಸಭೆಯಿಂದ 'ಅಹೋ! ಗೀತನೇ, ಅಹೋ ವಾದ್ಯವೇ' ಎಂಬ ಹೊಗಳಿಕೆಯ ಧ್ವನಿ ಅನುರಣನಗೊಳ್ಳುತ್ತಿದೆ. ದೇವ ನರ್ತಕಿ ನೀಲಾಂಜನೆಯ ವಸ್ತ್ರ, ಆಭರಣ ಆಡಂಬರದ ಬೆಡಗನ್ನು ಪಂಪ ಮಾತ್ರ ವರ್ಣಿಸಬಲ್ಲ. ಅವಳೇ ಒಂದು ಹೂಮಾಲೆಯಂತೆ ಕಂಗೊಳಿಸಿದಳು. ಅವಳು ಸಂಗೀತ– ನೃತ್ಯ ಕಲೆಯಲ್ಲಿ ದೇವೇಂದ್ರನಿಂದ ಮೆಚ್ಚುಗೆ ಪಡೆದವಳು. ಕಬ್ಬಿನ ಬಿಲ್ಲಿಂದ ಹೊಮ್ಮಿದ ಮನ್ಮಥನ ಹೂಬಾಣ ಜೀವ ಪಡೆಯಿತೋ ಎಂಬಂತೆ ಸಭೆ ಪ್ರವೇಶಿಸುತ್ತಾಳೆ. ಅವಳು ಪ್ರವೇಶಿಸಿದ್ದು ಕೇವಲ ಸಭೆಯನ್ನಲ್ಲ ಸಭಿಕರ ಅಂತರಂಗವೆಂಬ ರಂಗಮಂಟಪವನ್ನು. ನಾಟ್ಯ ರಸಗಳೆಲ್ಲಾ, ಜೀವ ತಳೆದವೋ ಎನ್ನುವ ಭಂಗಿಯ ಆಕೆ ನಡೆದಾಡುವ ಕಾಮಲತೆಯಂತೆ, ಮೋಡದ ಮರೆಯ ಮಿಂಚಿನಂತೆ ಹೊಳೆಯುತ್ತಿದ್ದಳು. ಅರಸರು ತೊಟ್ಟ, ಹಾರ ಮಣಿಗಳಲ್ಲಿ ಅವಳ ಬಿಂಬ ಪ್ರತಿ ಫಲಿಸಿತು. ಕೇವಲ ಎದೆಯ ಆಭರಣಗಳಲ್ಲಿ ಮಾತ್ರವಲ್ಲ ಅವರ ಎದೆಯನ್ನು ಪ್ರವೇಶಿಸುವಂತೆ ಅವಳ ನೃತ್ಯ ನಡೆಯಿತು. ಶೃಂಗಾರರಸ ಲೇಪಿತ ವಿಲಂಬಿತ, ಮಧ್ಯ, ದ್ರುತವೆಂಬ ಮೂರು ಲಯ, ತತ್ವಗಳಿಗನುಸಾರವಾಗಿ ವಾದ್ಯಗಳು ಮೊಳಗಿದವು. ಅವಳು ಧರಿಸಿದ ಆಭರಣಗಳೇ ತಾಳದ ಲಯವನ್ನು ನಿರ್ದೇಶಿಸಿದವು. ರಸಭಾವಾನಯೆ, ರಂಗಪ್ರವೇಶ, ಚಲನವಲನ, ನೋಡುವ ಕಣ್ಣುಗಳು– ಈ ಎಲ್ಲವೂ ಹೊಸತು ಎಂಬ ವಾತಾವರಣ ಏರ್ಪಟ್ಟಿತು. ಹೀಗೆ ನೀಲಾಂಜನ ನಾಟ್ಯವೇದವನ್ನೇ ಹೊಚ್ಚ ಹೊಸದಾಗಿಸಿದಳು. ಭಾವ, ಅನುಭಾವ ಮತ್ತು ವಿಭಾವಗಳ ವಿನ್ಯಾಸಗಳಲ್ಲಿ ಒಸರುವ ಅವಳ ನರ್ತನದ ರಸವನ್ನು ಅರಿಯಲು ನೃತ್ಯವನ್ನು ಬಲ್ಲ ದೇವೇಂದ್ರ, ಆದಿದೇವರಿಗೂ ಅಸಾಧ್ಯವಾಯಿತು. ರಂಗದ ಮೇಲಿನ ಬರುವ, ಹೋಗುವ ನೃತ್ಯದ ಸೊಗಸು ಸಭಿಕರ ಎದೆಯಲ್ಲಿ ಹೋಗುವ, ಹೊರ ಬರುವ ಚಮತ್ಕಾರವಾಗಿಯೇ ತೋರುತ್ತಿತ್ತು. ಪಂಪನ ವರ್ಣನೆ ಹೇಗೆ ಮುಂದುವರೆಯುತ್ತದೆಂದರೆ ವಾದಕನ ವಾದನವೂ ಅವಳ ಸೊಗಸಿನ ಮುಂದೆ ತಡಬಡಿಸಲು ತನ್ನ ಹುಬ್ಬಿನ ಚಲನೆಯಿಂದಲೇ ಮತಿ ಕೆಡದಂತೆ ವಾದಕನನ್ನು ನಿರ್ದೇಶಿಸುತ್ತಾಳೆ ಎನ್ನುವಂತೆ. ಅಮಲೇರಿಸುವ ಮದ್ದಿನಂತೆ ನೀಲಾಂಜನೆ ತನ್ನ ನೃತ್ಯದಿಂದ ನೋಡುಗರನ್ನು ಮೈಮರೆಸುತ್ತಾಳೆ. ಇದು ಪಂಪ ಕೊಂಡೊಯ್ಯುವ ಭೋಗದ ತುತ್ತ ತುದಿ. ಆದರೆ ಪ್ರಕೃತಿಯ ನಿಯಮದಂತೆ ಮೇಲಕ್ಕೆ ಏರಿದ್ದುದು ಕೆಳಗೆ ಇಳಿಯಲೇಬೇಕಲ್ಲವೇ?

ನರ್ತನದಲ್ಲಿ ಸಭಿಕರು ಮೈಮರೆತಿದ್ದಾಗ ಆಯುಷ್ಯ ಮುಗಿದ ನೀಲಾಂಜನೆ ತಟಕ್ಕನೆ ಅಲ್ಲಿಂದ ಮರೆಯಾಗುತ್ತಾಳೆ. ರಸಾಭಾಸಕ್ಕೆ ಹೆದರಿದ ಇಂದ್ರ ತಕ್ಷಣವೇ ನೀಲಾಂಜನೆಯ ಪ್ರತಿಕೃತಿ ನಿಲ್ಲಿಸಿ ನೃತ್ಯ ಮುಂದುವರೆಸುತ್ತಾನೆ. ಆದರೆ ಇತರರನ್ನುಳಿದು ಆದಿದೇವ ಜೀವ–ಸಾವಿನ ಚಮತ್ಕಾರವನ್ನು ಕಣ್ಣೆದುರೇ ಕಂಡು ಅಚ್ಚರಿಗೊಳ್ಳುತ್ತಾನೆ. ಸುಂದರ ನಾರೀರೂಪದ ಯಂತ್ರ ಕಣ್ಣೆದುರೇ ಕರಗಿ ಹೋದುದನ್ನು ನೋಡಿ ಸಂಸಾರದ ಅನಿಶ್ಚತೆಯನ್ನು ಅರಿಯುತ್ತಾನೆ. ಎಷ್ಟೆಷ್ಟೋ ಅಗಾಧವಾದ ಭೋಗ ಭಾಗ್ಯಗಳನ್ನು ಅನುಭವಿಸಿಯೂ ನನ್ನ ಬಯಕೆ ತೀರುತ್ತಿಲ್ಲವಲ್ಲ ಎಂಬ ಯೋಜನೆಗೆ ಒಳಗಾಗುತ್ತಾನೆ. ಎಷ್ಟೋ ಪ್ರಸಿದ್ಧರು ಅರಸರು, ಅಧಿಕಾರಿಗಳು, ಶ್ರೀಮಂತರು ವಿಷಯವೆಂಬ ಭೋಗದ ಕಳ್ಳನ್ನು ಕುಡಿದು ಅಮಲೇರಿ ಧರ್ಮದ ದಾರಿಯಿಂದ ಜಾರಿ, ಕ್ರೂರವಾದ ಸಾವಿನ ಬಾಯಿಯೆಂಬ ಹುಳಿಯಲ್ಲಿ ಮುಳುಗಿ ಹೋದರು. ಸಂಗೀತ, ನೃತ್ಯ, ಮದಿರೆಯೆಂಬ ಭೋಗಗಳಲ್ಲಿ ಹುರುಳಿಲ್ಲ. ಇದು ಪಂಪ ಸಂಸಾರವೆಂಬ ನಾಟಕಚಕ್ರಕ್ಕೆ ಕೊಡುವ ಅರ್ಥಪೂರ್ಣ ಅಂತ್ಯ.

■ **ಅಮೃತಮತಿ**

## ಮಾತೇ ಮುತ್ತು

ಹಳೆಹಾದಿ ನಡೆಗಲಿವವರೆಗೆ ಎಮಗೆ ಸಾಕು
ಬಲಿಯುವುದಕೆ, ನಲಿಯುವುದಕೆ ಹೊಸ ಹಾದಿ
ಬೇಕು.

—ಎಂ.ಗೋಪಾಲಕೃಷ್ಣ ಅಡಿಗ

ನೀವು ದೊಡ್ಡ ಮನುಷ್ಯರಾಗಿದ್ದರೆ, ಯಾವ
ಕರ್ತವ್ಯವನ್ನೂ ಸಣ್ಣದೆಂದು ಭಾವಿಸಲಾರಿರಿ.

—ಜಾರ್ಜ್ ಮೆಕ್ಡೊನಾಲ್ಡ್

ಬಡವರಿಗೆ ಇರುವ ಸೌಲಭ್ಯವೇ ನಾಗರಿಕತೆಯ
ಅಳತೆಗೋಲು.

—ಡಾ.ಜಾನ್ಸನ್

ಜ್ಞಾನದ ಬೆಳಕು ಹೊರಗಡೆಯಿಂದ ಹತ್ತಿಸಬಲ್ಲ
ಲಾಟೀನಿನ ಬೆಳಕಲ್ಲ; ಅದು ಸ್ವಯಂಪ್ರಭೆ
ಬೀರುವ ಮಿಂಚುಹುಳದ ಜೀವಕ್ರಿಯೆಯ
ಫಲವಾದ ಬೆಳಕು.

—ರವೀಂದ್ರನಾಥ ಟ್ಯಾಗೋರ್

ರೈತರೇ ಮಾನವ ನಾಗರಿಕತೆಯ ಸ್ಥಾಪಕರು.

—ಡೇನಿಯಲ್ ವೆಬ್ಸ್ಟರ್

ಒಂದು ಮೇಣದ ಬತ್ತಿಯಿಂದ ಸಾವಿರಾರು
ದೀಪಗಳನ್ನು ಬೆಳಗಬಹುದು. ಹಾಗೆಯೇ
ಜೀವನದಲ್ಲಿ ಸಂತೋಷವನ್ನೂ ಇತರರೊಡನೆ
ಹಂಚಿಕೊಳ್ಳಬೇಕು.

—ಗೌತಮ ಬುದ್ಧ

ದೀಪವು ತನ್ನನ್ನು ತಾನೇ ಪ್ರಕಾಶಗೊಳಿಸುತ್ತದೆ.
ದೀಪವನ್ನು ನೋಡಲು ಬೇರೆ ದೀಪ ಬೇಡ.

—ಬೃಹದಾರಣ್ಯಕ ವಾರ್ತಿಕ

ಮನಸ್ಸೇ ಎಲ್ಲಕ್ಕೂ ಮೂಲ; ಅದನ್ನು ಸರಿಪಡಿಸದ
ಹೊರತು ಇನ್ನಾವುದೂ ಸರಿಯಾಗಲಾರದು.

—ಡಿವಿಜಿ